

ನವಿರು ಪ್ರೇಮ ಕತೆಯ 'ಟೆಸ್ಟ್'ನ ಒಂದು ದೃಶ್ಯ

ಅಂಥ ಕಡೆ ಕಿವಿಗಡಚಿಕ್ಕುವ ಶಬ್ದದಲ್ಲಿ ಬಾಂಬ್ ಸಿಡಿದು ಅದರ ಭೀಕರ ಜ್ವಾಲೆಗಳು ಎತ್ತರಕ್ಕೇರುತ್ತವೆ. ಹವಾಮಾನದಲ್ಲಿ ಬದಲಾವಣೆಯಾಗಿ ಚಂಡಮಾರುತವೆದ್ದು ಎಲ್ಲವೂ ಹಾಳಾಗುತ್ತದೆ. ಪ್ರೇಮಿಗಳ ಶವವೂ ಸಿಗದಂತೆ ಎಲ್ಲವೂ ನಿರ್ನಾಮವಾಗುತ್ತದೆ. ಇದನ್ನೆಲ್ಲ ಕ್ಯಾಮೆರಾದಲ್ಲಿ ಸೆರೆ ಹಿಡಿದ ಕೌಶಲ್ಯಕ್ಕಾಗಿ ಕಪಾನಾನನ್ನು ಮೆಚ್ಚಲೇ ಬೇಕು.

ಎಲ್ಲಕ್ಕಿಂತ ಮುಖ್ಯವಾದುದು 'ಟೆಸ್ಟ್' ಚಿತ್ರದ ಶಬ್ದಗ್ರಹಣ (ಸೌಂಡ್ ಡಿಸೈನರ್‌ನ ಕೆಲಸ). ಫಿಲಿಪ್ ಲ್ಯಾಮ್ಶಿ ಎಂಬಾತ ಇಲ್ಲಿಯ ಶಬ್ದಗ್ರಹಣದ ಕೆಲಸ ಮಾಡಿದ ವ್ಯಕ್ತಿ. ಇಡಿಯ ಚಿತ್ರದಲ್ಲಿ ಒಂದೇ ಒಂದು ಸಂಭಾಷಣೆ ಇಲ್ಲ! ಇಲ್ಲ ಎಂದು ಅನಿಸುವುದೂ ಇಲ್ಲ. ಇಲ್ಲ ಎನ್ನುವ ಅರಿವೇ ಮೂಡಿಸದಷ್ಟು 'ಟೆಸ್ಟ್' ಪ್ರೇಕ್ಷಕರನ್ನು ಆವರಿಸುತ್ತದೆ. ಚಿತ್ರದಲ್ಲಿ ಸಂಭಾಷಣೆ ಎನ್ನುವುದು ಅನಿವಾರ್ಯವಾಗಿ ಬರಬೇಕೇ ಹೊರತು 'ನೋಡುವ' ಅಥವಾ 'ಕಾಣುವ' ಕಲೆಯಾದ